## ಹೃದಯಸ್ಪರ್ಶಿ ಲೇಖನ

'ಅಳಲು ತೊಡೆಯಲು ಕೂದಲು' (ಜು. 25, ಉಮಾ ಅನಂತ್), ಕೇಶದಾನದ ಬಗ್ಗೆ ಅರಿವು ಮೂಡಿಸುವ ಹೃದಯಸ್ಪರ್ಶಿ ಲೇಖನ. ಭಾರತೀಯ ಮಹಿಳೆಯರಲ್ಲಿ ಜಡೆ ಬಹಳ ಮೌಲ್ಯಯುತವಾದುದು. ಕ್ಯಾನ್ಸರ್‌ನಿಂದಾಗಿ ಅದನ್ನು ಕಳೆದುಕೊಂಡು ತಲೆ ಬೋಳಾಗುವಾಗ ಉಂಟಾಗುವ ಖಿನ್ನತೆ, ಯಾತನೆ ಅನೂಹ್ಯ. ಅಂಥವರ ಕಣ್ಣೀರೊರೆಸಲು ಒದಗಿ ಬರುವುದು ವಿಗ್ ಮಾತ್ರ. ಕೂದಲು ದಾನ ಮಾಡುವವರ ಬಗ್ಗೆ, ದಾನಿಗಳಿಂದ ಪಡೆದ ಕೂದಲಿನಿಂದ ವಿಗ್ ತಯಾರಿಸಿ ವಿತರಿಸುವ ಸಂಸ್ಥೆಗಳ ಬಗ್ಗೆ ಮಾಹಿತಿ ನೀಡಿರುವ ಲೇಖನ ಅತ್ಯುಪಯುಕ್ತ.

—ಸರಸ್ವತಿ ಶಂಕರ್, ಬೆಂಗಳೂರು




## ಈ ಹೊತ್ತಿನ ಜರೂರು

ಕ್ಯಾನ್ಸರ್‌ನಿಂದ ಕೂದಲು ಕಳೆದುಕೊಂಡ ಸ್ತ್ರೀಯರ ಮನದಾಳದ ಸಂಕಟ ಕಣ್ಣೆದುರು ಬಂದು ಮನಸ್ಸು ವಿಹ್ವಲವಾಯಿತು. ಕೂದಲು ದಾನ ಮತ್ತು ಮರುಬಳಕೆ ವಿಧಾನದ ಕುರಿತ ಮಾಹಿತಿ ಉಪಯುಕ್ತವಾಗಿದೆ. ಏನೆಲ್ಲಾ ತಂತ್ರಜ್ಞಾನ, ಸಂಶೋಧನೆಗಳು ನಡೆದೂ ತಲೆಗೂದಲು ಕಸಿದುಕೊಳ್ಳುವ ಕ್ಯಾನ್ಸರ್ ಚಿಕಿತ್ಸಾ ವಿಧಾನದಲ್ಲೂ ಪರ್ಯಾಯ ಸಂಶೋಧನೆ ಈ ಹೊತ್ತಿನ ಜರೂರಾಗಲಿ. ಈ ಸಮಸ್ಯೆಗೆ ದನಿಯಾದ 'ಸುಧಾ'ಳಿಗೆ ಅಭಿಮಾನಪೂರ್ವಕ ಧನ್ಯವಾದ.

—ಚನ್ನಬಸವ ಪುತ್ತೂರ್ಕರ, ಉಡುಪಿ

## ದಾನದ ಸಂಕಲ್ಪ

ಕೇಶದಾನ ಮಾಡಿದ ಕಿರುತೆರೆ ನಟಿ ಹಾಗೂ ವಿದ್ಯಾರ್ಥಿನಿಯರಿಗೆ ನನ್ನ ವಂದನೆ. ನಾನೂ ನನ್ನ ಉದ್ದ ಕೇಶದ ಸ್ವಲ್ಪ ಭಾಗವನ್ನು ದಾನ ಮಾಡುವ ಸಂಕಲ್ಪ ಮಾಡಿದ್ದೇನೆ.

—ಕಮಲಾ ರಾವ್, ಬೆಂಗಳೂರು

ಕ್ಯಾನ್ಸರ್ ಪ್ರಕರಣಗಳು ದಿನೇ ದಿನೇ ಹೆಚ್ಚುತ್ತಿರುವ ಈ ಸಂದರ್ಭದಲ್ಲಿ, ಕೇಶದಾನದ ಕುರಿತ ಈ ಲೇಖನ ಸಮಯೋಚಿತ.

—ಎಂ.ಎಸ್. ವಿಜಯ ಕುಮಾರ್

## ಕಪ್ಪೆಗಳ ದರ್ಶನ

'ಮಂಡೂಕಗಳ ಮಹಾಮೇಳ' (ಜು. 25, ಗೋಣಿಕೊಪ್ಪಲು ಡಿ. ಕೃಷ್ಣಚೈತನ್ಯ) ಕಪ್ಪೆಗಳ ಕುರಿತ ಲೇಖನ ಓದಿದಾಗ ನಮ್ಮೂರಿನ ಕಪ್ಪೆಗಳ ನೆನಪಾಯಿತು. ನಾವು ಚಿಕ್ಕವರಿದ್ದಾಗ ಕಾಸರಗೋಡಿನ ಮನೆಯ ಸುತ್ತಮುತ್ತ ಇದ್ದ ಭತ್ತದ ಗದ್ದೆಗಳಲ್ಲಿ, ತೋಟಗಳಲ್ಲಿ ನೂರಾರು ಕಪ್ಪೆಗಳನ್ನು



ನೋಡುತ್ತಿದ್ದೆವು. ಮಳೆಗಾಲದಲ್ಲಿ ಕಪ್ಪೆಗಳ ಸಂಗೀತ ಕೇಳುತ್ತಾ ಮಲಗುತ್ತಿದ್ದೆವು. ಆಮೇಲೆ ಕಪ್ಪೆಗಳನ್ನು ಹಿಡಿದು ಅದರ ಕಾಲುಗಳನ್ನು ರಫ್ತು ಮಾಡಲಾರಂಭಿಸಿದರು. ಮರ ಗಿಡಗಳು, ಗದ್ದೆಗಳು ಕಡಿಮೆಯಾಗುತ್ತಾ, ಕಪ್ಪೆಗಳೂ ಕಡಿಮೆಯಾದವು. ಬೆಂಗಳೂರಿನಲ್ಲಿ ಕೆರೆ ಪಕ್ಕ, ಪಾರ್ಕ್, ಖಾಲಿ ನಿವೇಶನಗಳಲ್ಲಿ ಕೆಲವೊಮ್ಮೆ ಕಪ್ಪೆಗಳ ದರ್ಶನವಾಗುತ್ತದೆ.

—ಕೆ. ಗಣೇಶ ರಾಜ, ಬೆಂಗಳೂರು

## ಅದ್ಭುತ ಆಟಗಾರ

'ದಿ ವಾಲ್; ಮೇಷ್ಟರಾಗಿಯೂ ಕಮಾಲ್' (ಜು. 25, ವಿಶಾಖ ಎನ್.) ಕ್ರೀಡಾಬರಹ ಚೆನ್ನಾಗಿದೆ. ರಾಹುಲ್ ದ್ರಾವಿಡ್ ಭಾರತ ಕ್ರಿಕೆಟ್ ತಂಡ ಕಂಡ ಅದ್ಭುತ ಆಟಗಾರ. ಇದು ಮತ್ತೊಮ್ಮೆ ಸಾಬೀತಾಯಿತು. ಅದ್ಭುತ ತರಬೇತುದಾರ ಕೂಡ.

—ಚಿನಕುರಳಿ ಎಸ್. ಶ್ರೀನಿವಾಸ

## ಸ್ಮಾರ್ಟ್ ಕಥೆ



'ಸುಖ' (ಜು. 25, ಸಂತೆಬೆನ್ನೂರು ಫೈಜ್ನಟ್ರಾಜ್) ಕಥೆ ತುಂಬಾ ಸ್ಮಾರ್ಟ್ ಹಾಗೂ ಅರ್ಥಗರ್ಭಿತವಾಗಿದೆ. 'ಸುಖ' ಎಂಬ ಮಾಯಾಲೋಕದಲ್ಲಿ ತೇಲುತ್ತಿರುವವರಿಗೆ, ಬೇರೆಯವರ ಆಡಂಬರದ ಬದುಕನ್ನು ಹೋಲಿಸಿಕೊಂಡು ಬದುಕದೆ ಹಾಸಿಗೆಯಿದ್ದಷ್ಟು ಕಾಲು ಚಾಚಿ ಸರಳವಾಗಿ ಬದುಕಬೇಕೆಂಬ ಪಾಠ ಕಲಿಸುವಂತೆ ಇದೆ.

—ನಾಗರಾಳು ಶ್ರೀನಿವಾಸ ಶೆಟ್ಟಿ

## ಭಾಗ್ಯ!

'ಭುವನದ ಬೆಡಗು' (ಜು. 18, ಪ್ರಮೋದ) ಕವಿ ನೇಮಿಚಂದ್ರನ ಈ ಉಕ್ತಿಯನ್ನು ನೆನಪಿಸಿತು; "ಬೆಲೆಯಿಂದಕ್ಕುಮೆ ಕೃತಿ? ಭುವನದ ಭಾಗ್ಯದಿಂದಮಕ್ಕುಂ!" ಬೆಡಗಾಗಲಿ ಭಾಗ್ಯವಾಗಲಿ, 'ಕೃತಿ'ಯಂತೆ ಕ್ರೀಡೆಗೂ ಅನ್ವಯಿಸಬಹುದು.

—ಸಿಪಿಕೆ, ಮೈಸೂರು

## ಅಚ್ಚಳಿಯದೇ ಉಳಿವರು

'ಕನ್ನಡದ ಕೊರಳು' (ಜು. 25, ಮಹತಿ) — ಅಪರ್ಣಾ ಅವರಿಗೆ ಸರಿಸಮನಾದ ಪದ. ತಮ್ಮ ಸ್ವಚ್ಛ ಕನ್ನಡದ ನಿರೂಪಣೆಯಿಂದಲೇ ಕನ್ನಡಿಗರ ಮನದಲ್ಲಿ ಅಚ್ಚಳಿಯದೆ ನಿಂತವರು. ಅವರು ಮರೆಯಾದರೂ ಅವರ ಕನ್ನಡ, ಕನ್ನಡಿಗರ ಕಿವಿಗಳಲ್ಲಿ ಅನುರಣಿಸುತ್ತಿರುತ್ತದೆ.

—ಉಷಾ, ಹಾಸನ



## ಅಪರ್ಣಾ ಮಾತೇ ಕನ್ನಡ

ಕನ್ನಡತಿಯ ನಿರ್ಗಮನ ಅಕಾಲಿಕ, ಆಘಾತವೆನಿಸಿತು. ಅಪರ್ಣಾ ಅವರ ಮಾತು ಕೇಳುವುದೇ ಸೌಭಾಗ್ಯವಾಗಿತ್ತು. ಕನ್ನಡವೇ ಸತ್ಯ ಕನ್ನಡವೇ ನಿತ್ಯ ಎಂಬುದನ್ನು ಅವರ ಮಾತೇ ಒತ್ತಿ ಹೇಳುತ್ತಿತ್ತು.

—ಬಿ.ಎಸ್. ಮುಳ್ಳೂರ, ರಾಮದುರ್ಗ

## ಅಂತಃಕರಣ ಕಲಕಿದ ಸಂಚಿಕೆ

ಅಪರ್ಣಾ ಅವರ ಕುರಿತ ನಂದಾದೀಪ ಬರಹ, ಇದೇ ಸಂದರ್ಭದಲ್ಲಿ ಕ್ಯಾನ್ಸರ್‌ರೋಗಿಗಳಿಗೆ ವಿಗ್ ಕುರಿತ ಮುಖಪುಟ ಲೇಖನ, ಅಪರ್ಣಾ ಅವರ ಕುರಿತ ನಂಜುಂಡಸ್ವಾಮಿ ಅವರ ಕಾರ್ಟೂನ್ 'ನನ್ನ ಮುಂದಿನ ನಿಲ್ದಾಣ ಯಾವುದು ಹೇಳಿ?' ಎಲ್ಲಾ ಸೇರಿ ಅಂತಃಕರಣ ಕಲಕಿದವು.

—ಈರಪ್ಪ ಎಂ. ಕಂಬಳಿ

## ನಿರೂಪಣೆಯ ಹೊಸ ಭಾಷ್ಯ

ಸುಂದರ–ಶಾಂತ ನಿಲುವಿನ ಭಾವಚಿತ್ರ ನೋಡಿ ಮನಸು ಮೂಕವಾಯಿತು. ನಿರೂಪಣೆಗೆ ಹೊಸ ಭಾಷ್ಯ ಬರೆದವರು ಅಪರ್ಣಾ. ನನ್ನ ಹೃದಯ ಭಾರವಾಯಿತು.

—ಕೆ.ಎಂ. ಮಧ್ವರಾಯ, ಬೆಂಗಳೂರು

## ಮಾದರಿ 'ಅಪರ್ಣಾ'

ನಿರೂಪಣೆ ಮಾಡಿದರೆ ಅಪರ್ಣಾ ಅವರಂತೆ ಮಾಡಬೇಕು ಎಂದರೆ ಅತಿಶಯೋಕ್ತಿ ಅಲ್ಲವೇ ಅಲ್ಲ. ಕನ್ನಡ ಚಿತ್ರರಂಗದ ಮೊದಲ ಹೆಸರು ರಾಜ್ ಕುಮಾರ್ ಎಂಬಂತೆ ನಿರೂಪಣೆ ಎಂದರೆ ಅಪರ್ಣಾ ಅವರ ಹೆಸರು ಥಟ್ಟನೆ ನೆನಪಿಗೆ ಬರುತ್ತದೆ. ಅಪರ್ಣಾ ಅವರ ಕನ್ನಡದ ಬಗೆಗಿನ ಪ್ರೀತಿ, ಸಾಮಾಜಿಕ ಪ್ರಜ್ಞೆ ಎಲ್ಲರಿಗೂ ಮಾದರಿ.

—ಮಲ್ಲಿಕಾರ್ಜುನ ಸುರಧೇನುಪುರ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in